ಮಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಂಬೇಡ್ಕರ್ ಭವನದ ನಿರ್ಮಾಣಕ್ಕಾಗಿ ಧನಸಹಾಯ ರೂಪದಲ್ಲಿ ರೂ. 10.00 ಲಕ್ಷಗಳನ್ನು ನೀಡಲು ನಿರ್ದೇಶಿಸಿದ್ದು, ಅದರಂತೆ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶಿಕಾರಿಪುರ ಪುರಸಭೆಯಲ್ಲಿ ಹೊಸ ಲೇಔಟ್‌ಗಳನ್ನು ಮಾಡುವಾಗ ಅಭಿವೃದ್ಧಿ ಶುಲ್ಕ ನಿಗದಿಪಡಿಸುವುದು.

1516(2075)

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ): ಮಾನ್ಯ ಪೌರಾಡಳಿತ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಕಾರಿಪುರ ಪುರಸಭೆಯಲ್ಲಿ ಹೊಸ ಲೇ ಔಟ್‌ಗಳನ್ನು ಮಾಡುವಾಗ ಅಭಿವೃದ್ಧಿ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳು ನೀಡಿರುವ ವರದಿಯನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ವಿಧಾನ ಸಭೆಯಲ್ಲಿ ನೀಡಿರುವ ಭರವಸೆಯನ್ನು ಈಡೇರಿಸದಿರುವುದಕ್ಕೆ ಕಾರಣಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್(ಪೌರಾಡಳಿತ ರಾಜ್ಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ ನಅಇ 173 ಜಿಇಎಲ್ 99 ದಿ: 30-6-99ರಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ದಿ: 24-3-98 ರಂದು ಹೊರಡಿಸಿದ ಆದೇಶವನ್ನು ಎತ್ತಿಹಿಡಿದು ಶಿಕಾರಿಪುರ ಪುರಸಭೆಯ ವ್ಯಾಪ್ತಿಯಲ್ಲಿಯ ಹೊಸ ಬಡಾವಣೆಗಳ ಕುರಿತಂತೆ ಅಭಿವೃದ್ಧಿ ಶುಲ್ಕವನ್ನು ಪ್ರತಿ ಚದರ ಅಡಿಗೆ ರೂ 3-00 ನ್ನು ನಿಗಧಿಪಡಿಸಿ ಆದೇಶ ಹೊರಡಿಸಲಾಗಿದೆ.

ಅಂಬೇಡ್ಕರ್ ಯೋಜನೆಗೆ ನಿಗದಿಪಡಿಸಿದ ಹಣ.

1517(2172)

ಶ್ರೀ ಪೂಜಾರಿ ಪ್ರಹ್ಲಾದ್ ಹನುಮಂತಪ್ಪ (ಬಾಗಲಕೋಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1996-97, 1997-98, 1998-99 ಹಾಗೂ 1999-2000ನೇ ಸಾಲುಗಳಲ್ಲಿ ಅಂಬೇಡ್ಕರ್ ಯೋಜನೆಗಾಗಿ ನಿಗದಿಪಡಿಸಿದ ಹಣವೆಷ್ಟು? ಬಿಡುಗಡೆ ಮಾಡಿದ ಹಣವೆಷ್ಟು?